# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(4)ಪಿಆರ್/177/1999–2000
2019–2020

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 3/10/19

## ಸುತ್ತೋಲೆ

ವಿಷಯ: ಕಿರಿಯ ಆರೋಗ್ಯ ಪರಿವೀಕ್ಷಕರ ವೃಂದಕ್ಕೆ ಅರ್ಹ ನಾಲ್ಕನೇ ದರ್ಜೆ ನೌಕರರು, ಪೌರಕಾರ್ಮಿಕರು, ಸ್ಯಾನಿಟರಿ ದಫೇದಾರ್, ಉಪ ನೋಂದಣಿಗಾರರು ಮತ್ತು ವಾಕ್ಸಿನೇಟರ್ ವೃಂದದಿಂದ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ: 1) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 27–02–2019.
2) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018, ದಿ: 15–05–2019.
3) ಈ ಕಛೇರಿ ಆದೇಶ ಸಂಖ್ಯೆ:ಬಿ12(5ಜಿ)ಪಿಆರ್/118/19–20 ದಿ:11–09–2019.

* * * *

ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 15–05–2019ರಲ್ಲಿ ದಿನಾಂಕ: 05–03–2019ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018 ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ದಿನಾಂಕ:27–02–2019ರ ಸರ್ಕಾರಿ ಆದೇಶದ ಕಂಡಿಕೆ–(8)ರ ಉಪ ಕಂಡಿಕೆ–(1)ರನ್ವಯ ಕ್ರಮ ತೆಗೆದುಕೊಂಡ ನಂತರ, ಸದರಿ ಆದೇಶದ ಕಂಡಿಕೆ–(8)ರ ಉಪ ಕಂಡಿಕೆ–(2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ / ಅಂತಿಮ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗಧಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗಧಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಈ ಆದೇಶ ಹೊರಡಿಸಿದ ಗರಿಷ್ಟ ಮೂವತ್ತು ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ.

ಆದ್ದರಿಂದ, ಸರ್ಕಾರವು ಉಲ್ಲೇಖ–(2)ರ ಆದೇಶದಲ್ಲಿ ನೀಡಿರುವ ನಿರ್ದೇಶನದಂತೆ ದಿನಾಂಕ:01–01–2019ಕ್ಕೆ ಇರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಡಿ' ದರ್ಜೆ ವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಚುರ ಪಡಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ನಾಲ್ಕನೇ ದರ್ಜೆ ನೌಕರರು, ಪೌರಕಾರ್ಮಿಕರು, ಸ್ಯಾನಿಟರಿ ದಫೇದಾರ್, ಉಪ ನೋಂದಣಿಗಾರರು ಮತ್ತು ವಾಕ್ಸಿನೇಟರ್ ವೃಂದದಿಂದ ಖಾಲಿ ಇರುವ ಕಿರಿಯ ಆರೋಗ್ಯ ಪರಿವೀಕ್ಷಕರುಗಳ ವೃಂದಕ್ಕೆ ಮುಂಬಡ್ತಿಯನ್ನು ನೀಡಲು ಉದ್ದೇಶಿಸಲಾಗಿರುವ ಹಿನ್ನೆಲೆಯಲ್ಲಿ ಅರ್ಹ ನೌಕರರುಗಳು ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ (ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್, ಅಕೌಂಟ್ಸ್ ಹೈಯರ್ ಮತ್ತು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ / ವಿನಾಯತಿ) ಉತ್ತೀರ್ಣರಾಗಿರುವ ಮೂಲ ಪ್ರಮಾಣ ಪತ್ರಗಳು, ಸ್ಯಾನಿಟರಿ ಇನ್ಸ್‌ಪೆಕ್ಟರ್ ಡಿಪ್ಲೋಮೋ ಪರೀಕ್ಷೆ ಪ್ರಮಾಣ ಪತ್ರಗಳು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಗಳನ್ನು ಈ ಸುತ್ತೋಲೆ ಹೊರಡಿಸಿದ 07 ದಿನಗಳೊಳಗಾಗಿ ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಬಟವಾಡೆ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಕಛೇರಿಗೆ ಕಳುಹಿಸಲು ಸೂಚಿಸಲಾಗಿದೆ.

Copy to
IT Section
for Publish

ಪಾಲಿಕೆಯ ಎಲ್ಲಾ ವಲಯ ಅಧೀಕ್ಷಕ ಅಭಿಯಂತರರು / ಮುಖ್ಯ ಅಭಿಯಂತರರು ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸ.ಕಾ.ನಿ.ಅ. / ಪರಿಸರ ಅಧಿಕಾರಿ ರವರುಗಳು ಮೇಲ್ವಿಚಾರಣೆ ಮಾಡಿ ಮೇಲ್ಕಂಡಂತೆ ಕ್ರಮ ಜರುಗಿಸಲು ಸೂಚಿಸಿದೆ.

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು** : ಪ್ರತಿಯನ್ನು : ಪೂಜ್ಯ ಮಹಾಪೌರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸದೆ.
: ಅಪರ / ಜಂಟಿ ಆಯುಕ್ತರು / (ಪಶ್ಚಿಮ) / (ದಕ್ಷಿಣ) / (ಪೂರ್ವ) / (ದಾಸರಹಳ್ಳಿ) / (ರಾ.ರಾ.ನಗರ) / (ಮಹದೇವಪುರ) / (ಯಲಹಂಕ) / (ಬೊಮ್ಮನಹಳ್ಳಿ) ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸುತ್ತಾ, ಅರ್ಹರಿರುವ ನೌಕರರುಗಳ ಸೇವಾ ಪುಸ್ತಕ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಹಾಗೂ ನಮೂನೆಯಂತೆ ದೃಢೀಕರಣದೊಂದಿಗೆ ಈ ಕಛೇರಿಗೆ ಕಳುಹಿಸಲು ಸೂಚಿಸಿದೆ.
: ಕಛೇರಿ ಪ್ರತಿ.

# ನಮೂನೆ

**ನಾಲ್ಕನೇ ದರ್ಜೆ ನೌಕರರು, ಪೌರಕಾರ್ಮಿಕರು, ಸ್ಯಾನಿಟರಿ ದಫೇದಾರ್, ಉಪ ನೋಂದಣಿಗಾರರು ಮತ್ತು ವ್ಯಾಕ್ಸಿನೇಟರ್ ವೃಂದದಿಂದ ಖಾಲಿ ಇರುವ ಕಿರಿಯ ಆರೋಗ್ಯ ಪರಿವೀಕ್ಷಕರುಗಳ ವೃಂದಕ್ಕೆ ಮುಂಬಡ್ತಿ ನೀಡುವ ತನಿಖಾ ಪಟ್ಟಿ.**

| ಕ್ರಮ ಸಂಖ್ಯೆ | ವಿಷಯ | ಮಾಹಿತಿ |
|---|---|---|
| 1. | ಹೆಸರು | |
| 2. | ಪದನಾಮ | |
| 3. | ಹುಟ್ಟಿದ ದಿನಾಂಕ | |
| 4. | ಕೆಲಸಕ್ಕೆ ಸೇರಿದ ದಿನಾಂಕ | |
| 5. | ಪ್ರವರ್ಗ | |
| 6. | ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಿಕೊಂಡ ದಿನಾಂಕ | |
| 7. | ವಿದ್ಯಾರ್ಹತೆ | |
| 8. | ಉತ್ತೀರ್ಣರಾಗಿರುವ ಇಲಾಖಾ ಪರೀಕ್ಷೆಗಳ ವಿವರಗಳು | |
| 9. | ಇವರ ವಿರುದ್ಧ ಲೋಕಾಯುಕ್ತ/ಇಲಾಖಾ ವಿಚಾರಣೆ ಬಾಕಿ ಇದೆಯೇ ಅಥವಾ ಇಲ್ಲವೇ? (ಇದ್ದಲ್ಲಿ ಪ್ರಕರಣದ ವಿವರಗಳನ್ನು ಒದಗಿಸುವುದು) | |
| 10. | ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿದವರಾಗಿರುತ್ತಾರೆಯೇ / ಇಲ್ಲವೇ? | |
| 11. | ಷರಾ | |

ಬಟವಾಡೆ ಅಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ